ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶವನ್ನು ದಿನಾಂಕ 18-2-1992 ರಂದು ಹೊರಡಿಸಲಾಗಿದೆ.

ಆ) ಉತ್ತರ ಮೇಲಿನಂತೆ.

ಇ) ಬಳ್ಳಾಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರವನ್ನು ಸಧ್ಯದಲ್ಲಿ ತೀರ್ಮಾನಿಸಲಾಗುವುದು.

ಉಪಾಧ್ಯಕ್ಷರು : ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಸದಸ್ಯರು ಒಂದು ಕಾಗದವನ್ನು ಕಳುಹಿಸಿದ್ದಾರೆ. ಅದು ಏನೆಂದು ಕೇಳೋಣ.

ಮಾನ್ಯ ಉಪಾಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ನಾಗರಹೊಳೆ ಅಭಯಾರಣ್ಯಕ್ಕೆ ಬೆಂಕಿ

† ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಬೆಳಿಗ್ಗೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ನಾಗರಹೊಳೆ ಅಭಯಾರಣ್ಯ ಹತ್ತಿಕೊಂಡು ಸಂಪೂರ್ಣವಾಗಿ ನಾಶವಾಗತಕ್ಕಂಥ ಮಟ್ಟಕ್ಕೆ ಬಂದಿದೆ ಎಂದು ಸುದ್ದಿ ಬಂದಿದೆ. ಅಲ್ಲಿ ಕಳೆದ 3-4 ದಿವಸಗಳಲ್ಲಿ ಅಭಯಾರಣ್ಯ ಹತ್ತಿಕೊಳ್ಳುವುದಕ್ಕೆ ಮುಂಚೆ ಎಲ್ಲ ಪೋಲೀಸ್ ಅಧಿಕಾರಿಗಳು ಇದ್ದರೂ ಸಹಿತ ಏನು ಪ್ರಯೋಜನವಾಗಿಲ್ಲ. ಅವರು ಸಂಧಾನ ಮಾಡತಕ್ಕಂಥದ್ದರಲ್ಲಿ ವಿಫಲರಾಗಿ, ಆಮೇಲೆ ಯಾರೋ ಒಬ್ಬ ಚಿನ್ನಪ್ಪ ಎಂಬುವರು ಸತ್ತು ಹೋದ ಹಿನ್ನೆಲೆಯಲ್ಲಿ ಈ ಗಲಾಟೆ ಪ್ರಾರಂಭವಾಗಿದೆ. ಇವತ್ತು ಇಡಿ ರಾಷ್ಟ್ರದಲ್ಲಿ ಬಹಳ ಪ್ರಮುಖ್ಯವಾಗಿರತಕ್ಕಂಥ ಒಂದು ಅಭಯಾರಣ್ಯಕ್ಕೆ ಬೆಂಕಿ ಬಿದ್ದಿರತಕ್ಕಂಥ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಅಧಿಕಾರಿ ಏತಕ್ಕೆ ಇಷ್ಟೊಂದು ನಿರ್ಲಕ್ಷತೆಯನ್ನು ತೋರಿಸಿದ್ದಾರೆ? ಏತಕ್ಕೆ ಇಡೀ ಅಭಯಾರಣ್ಯ ನಾಶವಾಗಿ ಹೋಗಿದೆ? ಈ ಒಂದು ಪತ್ರಿಕೆಯಲ್ಲಿ ಬಂದಿರುವ ವಿಷಯದ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡಿದೆ? ಏನು ಕ್ರಮ ತೆಗೆದುಕೊಂಡಿದೆ? ಇದು ಹೇಗೆ ಪ್ರಾರಂಭವಾಯಿತು? ಅಲ್ಲಿಯ ಜನರು ಯಾಚ್ಚೆದ್ದು ಬೆಂಕಿ ಹಚ್ಚಿದ ಸಂದರ್ಭದಲ್ಲಿ ಅದನ್ನು ಹತೋಟಿಗೆ ತೆಗೆದುಕೊಳ್ಳದಿರತಕ್ಕಂಥ ಮಟ್ಟಕ್ಕೆ ಅಧಿಕಾರಿಗಳು ಹೋಗಿರಬೇಕಾದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದೆ? ಸರ್ಕಾರ ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

† ಶ್ರೀ ರಾಮಲಿಂಗ ರೆಡ್ಡಿ : ಇವತ್ತಿನ ದಿವಸ ನಾಗರಹೊಳೆಯಲ್ಲಿ ಬೆಂಕಿಬಿದ್ದು ಸಾವಿರಾರು ಎಕರೆ ಅರಣ್ಯ ಸುಟ್ಟು ಹೋಗಿರುವುದರ ಜೊತೆಗೆ ಅಲ್ಲಿರತಕ್ಕ ಸಹಸ್ರಾರು ಪ್ರಾಣಿಗಳು ಬೆಂದುಹೋಗಿವೆ ಎಂದು ಪತ್ರಿಕೆಗಳಲ್ಲಿ ನೋಡಿ ತಿಳಿದುಕೊಳ್ಳುತ್ತಿದ್ದೇವೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕೆಂದು ಈ ಸಭೆಯ ಮೂಲಕ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ನ್ಯಾಯಾಂಗ ತನಿಖೆಗಿಂತ ಮುಖ್ಯವಾಗಿ ಮಾನ್ಯ ಅರಣ್ಯ ಮಂತ್ರಿಗಳು ಸ್ಪಾಟ್‌ಗೆ ಹೋಗಿ ಏನಾಗಿದೆ ಎಂದು ನೋಡಿ ಮುಂದೆ ಬೆಂಕಿ ಹರಡದಂತೆ ಎಚ್ಚರಿಕೆ ವಹಿಸಿದರೆ

ಒಳ್ಳೆಯದು. ಇದು ಬಹಳ ಮುಖ್ಯ. ನ್ಯಾಯಾಂಗ ತನಿಖೆ ಬೇರೆ ವಿಷಯ. Later it could be done. Immediately the Forest Minister should go there and see that it is stopped.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅರಣ್ಯ ಮಂತ್ರಿಗಳು ಆ ಸದನದಲ್ಲಿದ್ದಾರೆ. ಈಗ ಕೂರ್ಗ್ ಲ್ಯಾಂಡ್ಸ್ ಬಗ್ಗೆ ಒಂದು ಮಿಾಟಿಂಗ್ ಕೂಡ ಇತ್ತು. ಅಲ್ಲಿ ಕೆಲವು ಜನರು ಇದನ್ನು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ವಿವರವಾಗಿ ಈ ಸದನದಲ್ಲಿ ಒಂದು ಹೇಳಿಕೆ ಮಾಡುತ್ತಾರೆ. ಆದ್ದರಿಂದ ಮಧ್ಯಾಹ್ನದ ಮೇಲೆ ಇದನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎಂ.ವಿ. ವೆಂಕಟಪ್ಪ : 13 ರಂದು ನಮ್ಮ ಪ್ರಶ್ನೆಗಳು ಕೆಲವು ಇದ್ದವು.. ಅಂದು ಪ್ರಶ್ನೋತ್ತರ ವೇಳೆಯನ್ನು ತೆಗೆದುಹಾಕಿದ್ದೀರಿ. ಶುಕ್ರವಾರ ಇದ್ದ ಪ್ರಶ್ನೆಗಳನ್ನು ಮುಂದೆ ತೆಗೆದುಕೊಳ್ಳುತ್ತೀರಾ?

ಉಪಾಧ್ಯಕ್ಷೀಣಿಯವರು : ಅವುಗಳನ್ನು ಅನ್‌ಸ್ಟಾರ್ಡ್ ಆಗಿ ಪರಿವರ್ತಿಸಿ ಇವತ್ತು ಪ್ಲೇಸ್ ಮಾಡಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ : ನಮಗೆ ಉತ್ತರ ಬರುವುದೇ ಅಪರೂಪ. ಹೀಗಿರುವಾಗ ಪ್ರಶ್ನೆಗಳನ್ನು ಅನ್‌ಸ್ಟಾರ್ಡ್ ಮಾಡಿದ್ದಾರೆ ಹೇಗೆ? ಇನ್ನೊಂದು ದಿವಸ ಹಾಕಬಹುದಾಗಿತ್ತಲ್ಲವೆ?

ಉಪಾಧ್ಯಕ್ಷೀಣಿಯವರು : ಮುಂದೆ ಅದೇ ರೀತಿ ಮಾಡೋಣ.

ಶ್ರೀ ವಿನಯಕುಮಾರ್ ಸೊರಕೆ : ನನ್ನ ಅನ್‌ಸ್ಟಾರ್ಡ್ ಪ್ರಶ್ನೆಗೆ ಉತ್ತರ ಬಂದಿಲ್ಲ.

ನಿಯಮ 334ರ ಮೇರೆಗೆ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ನಿಟ್ಟೂರಿಗೆ ಆರಕ್ಷಕ ಠಾಣೆಯ ಮಂಜೂರು.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ): ಮಾನ್ಯ ಉಪಾಧ್ಯಕ್ಷೀಣಿಯರೆ, ತುಮಕೂರು ಜಿಲ್ಲೆ. ಗುಬ್ಬಿ ತಾಲ್ಲೂಕು. ನಿಟ್ಟೂರು ಗ್ರಾಮವು ಹೋಬಳಿ ಕೇಂದ್ರವಾಗಿದ್ದು. ಶಿರಾ. ನೆಲ್ಲಿಗೆರೆ ಮತ್ತು ಬೆಂಗಳೂರು-ಹೊನ್ನಾವರ ರಸ್ತೆಗಳು ಕೊಡುವ ಕೇಂದ್ರವಾಗಿದ್ದು. ತಾಲ್ಲೂಕಿಗೆ ದೊಡ್ಡ ವ್ಯಾಪಾರ ಕೇಂದ್ರವಾಗಿರುತ್ತದೆ. ಇತ್ತೀಚೆಗೆ ಜನ ಸಂಚಾರ ಮತ್ತು ವಾಹನ ಸಂಚಾರ ಹೆಚ್ಚಾಗಿದ್ದು. ಪ್ರತಿ ವರ್ಷ ಅನೇಕ ಅಪಘಾತಗಳು ಸಂಭವಿಸಿದ್ದು. ನೂರಾರು ಜನರ ಸಾವಿಗೆ ಕಾರಣವಾಗಿದ್ದು. ಇದರಿಂದ ಊರಿನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿ ಗಲಭೆಗಳಿಗೆ ಕಾರಣವಾಗಿರುತ್ತದೆ. ಸುತ್ತ 8-10 ಕಿ.ಮಿಾ. ದೂರದವರೆಗೆ ಯಾವುದೇ ಆರಕ್ಷಕ ಠಾಣೆಗಳಿಲ್ಲದೆ. ಹತೋಟಿಗೆ ತರಲು ತುಂಬಾ ಶ್ರಮವಾಗಿರುತ್ತದೆ. ಇದನ್ನು ಸರಿಪಡಿಸಲು ಸದರಿ ನಿಟ್ಟೂರಿಗೆ ಒಂದು ಆರಕ್ಷಕ ಠಾಣೆ ಅವಶ್ಯಕತೆ ಇದ್ದು. ಇದಕ್ಕಾಗಿ ಮಂಡಲ ಪಂಚಾಯಿತಿಯವರು ಹಾಗೂ ಸಾರ್ವಜನಿಕರು ಅನೇಕ ಬಾರಿ ಸರ್ಕಾರಕ್ಕೆ ಒತ್ತಾಯ ತಂದಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.. ಈಗಲಾದರೂ. ಸರ್ಕಾರದವರು ಆರಕ್ಷಕ ಠಾಣೆಯನ್ನು ಮಂಜೂರ್ಮಾಡಿಕೊಡಬೇಕೆಂದು ಗೃಹ ಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷೀಣಿಯವರೆ. ನಾನು ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ತುಮಕೂರು ಜಿಲ್ಲೆ. ಗುಬ್ಬಿ ತಾಲ್ಲೂಕು. ನಿಟ್ಟೂರು ಗ್ರಾಮ ಹೋಬಳಿ ಕೇಂದ್ರವಾಗಿದ್ದು. ಬೆಂಗಳೂರು-ಹೊನ್ನಾವರ ರಸ್ತೆ ಕೂಡುವ ಕೇಂದ್ರ ಸ್ಥಾನವಾಗಿದ್ದು. ತಾಲ್ಲೂಕಿನ ದೊಡ್ಡ ವ್ಯಾಪಾರ